# ನನ್ನ ಸಿಂಗಾರಿ



**ಸೌಮ್ಯ ಪ್ರಭು ಕಲ್ಯಾಣ್ಕರ್**
ಕಲೆ: ವಿ.ಎಂ. ಮಂಜುನಾಥ್

ಯಾವುದೇ ಕ್ಲಾಸಿಕ್ ಅನಿಸಿಕೊಂಡ ಕೃತಿಯ ಪಾತ್ರಗಳು ನಮ್ಮ ಬದುಕಿನಲ್ಲಿ ನಮ್ಮೊಟ್ಟಿಗೇ ಹೆಜ್ಜೆ ಹಾಕುತ್ತಿರುತ್ತವೆ. ನಾವು ಯಾರನ್ನಾದರೂ ಬದುಕಿನಲ್ಲಿ ಕಳೆದುಕೊಂಡರೆ, ಅವರು ನಮ್ಮ ನೆನಪಿನಲ್ಲಿಯೇ ನಮ್ಮ ಜೊತೆಗೆ ಬದುಕುತ್ತಿರುತ್ತಾರಲ್ಲವೇ... ಹಾಗೆಯೇ. ಅದೇ ರೀತಿಯಾಗಿ ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯ ಕಥಾ ನಾಯಕಿ ಸಿಂಗಾರೆವ್ವ ನನ್ನ ಹೃದಯದಲ್ಲಿ ಸ್ಥಾನಪಡೆದವಳು. ಪ್ರತೀ ಸಲದ ಓದಿಗೂ ಅಷ್ಟೇ ಪ್ರಮಾಣದ ಸಂಕಟವನ್ನು ಪದೇ ಪದೇ ನನ್ನೊಳಗೆ ಹುಟ್ಟಿಸುತ್ತಾಳೆ, ಒಡನೆಯೇ ಜೀವನವನ್ನೆದುರಿಸುವ ದಾರಿಯನ್ನು ಮತ್ತೆ ಮತ್ತೆ ಮನಗಾಣಿಸುತ್ತಾಳೆ. ಅವಳು ನನಗೆ ಅಪ್ಪಟ ಸ್ತ್ರೀವಾದಿಯಂತೆ ಮಾತ್ರವಲ್ಲ ಜೀವನೋತ್ಸಾಹದ ಪರಮಗುರುವಂತೆ ಕಾಣಿಸುತ್ತಾಳೆ. ಮಡಿಲಿಗೆ ಬಿದ್ದ ಜೀವನವನ್ನು ಎದೆಗೊತ್ತಿಕೊಂಡು ಹತಾಶೆ, ಆಕ್ರೋಶ, ಯಾತನೆ, ಸಂಕಟ, ಒದ್ದಾಟ, ನರಳಾಟಗಳನ್ನೂ ಮೀರಿ ಅವಳು ಅವಡುಗಚ್ಚಿ ಬದುಕುವ ರೀತಿ ಅದ್ವಿತೀಯ ಎನಿಸುತ್ತದೆ.

ಈ ಕೃತಿಯಲ್ಲಿ ಕಂಬಾರರು ಆತಂಕ ಹುಟ್ಟಿಸುವಂಥ ಒಂದು ಹುಣಿಸೇ ಮೆಳೆಯನ್ನು ವರ್ಣಿಸಿದ್ದಾರೆ. ಅದನ್ನು ಓದುವಾಗ ಮನದಲ್ಲೊಂದು ಕಂಪನವೇಳುತ್ತದೆ. ಅವರು ಹೇಳುವಂತೆ ಗುಡ್ಡದಂಥ ಮರಗಳಿರುವ ಅದರ ಸ್ವರೂಪ ಈ ರಾಜ್ಯದ್ದಲ್ಲ, ದೇಶದ್ದೂ ಅಲ್ಲ, ಈ ಭೂಮಿಯದ್ದೂ ಅಲ್ಲದೇ ಯಾವುದೋ ಗೊತ್ತಿಲ್ಲದ ಗ್ರಹದ್ದು ಅನಿಸಿ ಮನಸ್ಸು ಅಳುಕಿನ ಆವರಣವನ್ನು ಪ್ರವೇಶಿಸುತ್ತದೆ. ಸಾವಿರದೆಂಟು ರಾಕ್ಷಸಾಕಾರದ ಹುಣಿಸೇ ಮರಗಳಿರುವ ಮೆಳೆ. ವಿಚಿತ್ರ ನಾದಗಳು, ಸ್ವರಗಳು, ಕಿರುಚಾಟಗಳು ಕೇಳುವ ವಿಚಿತ್ರ ಲೋಕ. ಭೂತ, ಪಿಶಾಚಿಗಳ ವಾಸಸ್ಥಾನ. ಹಕ್ಕಿಗಳಿಲ್ಲದ, ಸದ್ದಿಲ್ಲದ, ಕ್ಷಿತಿಜ-ಆಕಾಶ ಕಣ್ಕಟ್ಟು ಮಾಡಿ ಒದ್ದಾಡಿಸುವ ಸ್ಥಳ. ಹೊಕ್ಕವರು ಹೊರ ಬರಲಾಗದೇ, ಒಳ ಸಿಕ್ಕು ಒದ್ದಾಡಿ ಸತ್ತೇ ಹೋಗುವ ಉಸುಕಿನಂತಹ ಮೆಳೆಯದು. ಆ ಸಿಕ್ಕು ಸಿಕ್ಕಾದ ಹುಣಿಸೇ ಮೆಳೆಯೇ ಸಿಂಗಾರೆವ್ವನ ಬದುಕಿನ